ಉಳಿಸಿಕೊಳ್ಳುತ್ತೇನೆಂದು ಒಲಿದವನ ಬೆನ್ನು ಬಿದ್ದು ಬಂದವಳಿಗೆ ಶಾಶ್ವತವಾಗಿ ಉಳಿದಿದ್ದು ಕಲೆ ಒಂದೇ. 'ಓಡಿಹೋದವಳು' ಎನ್ನುವ ಕಲೆ. ಜನ್ಮೇಪಿ ಅಳಿಸಲಾಗದ ಕಲೆ. 'ಆಯುಷ್ಯ ತುಂಬಿ ಬಂದಿತ್ತು' ಅನ್ನುವ ಮಾತೊಂದಿದೆ. ಮೋಹನನಿಗೂ ಅದು ಅನ್ವಯವಾಗುವ ಗಳಿಗೆ ಸಮೀಪದಲ್ಲಿದೆಯೆಂದು ಗೊತ್ತಿದ್ದಿದ್ದರೆ ಅವನನ್ನು ಅನುಸರಿಸಿ ಹೊರಡುತ್ತಿದ್ದಳಾ ಕಾವೇರಿ? ಇದೆಂತಾ ಹುಚ್ಚು ಯೋಚನೆ? ತಾನು ಮನೆ ಬಿಟ್ಟು ಬರುತ್ತೇನೆಂದು ವಚನ ಕೊಡದಿದ್ದರೆ ಅವನೇಕೆ ಹೊಟ್ಟೆ ಹೊರೆದುಕೊಳ್ಳಲು ಆಧಾರವಾಗಿದ್ದ ಕೆಲಸ ಬಿಟ್ಟು, ಇದ್ದ ಊರು ಬಿಟ್ಟು, ಹುಂಬ ಧೈರ್ಯದ ಬೆನ್ನು ಬಿದ್ದು ಹೊರಡುತ್ತಿದ್ದ? ಒಂದರ್ಥದಲ್ಲಿ ತಾನೇ ಅವನ ಸಾವಿಗೆ ಕಾರಣಳಾದೆನೆಂಬ ಪಶ್ಚಾತ್ತಾಪ ಇವತ್ತಿಗೂ ಕಾವೇರಿಯಲ್ಲಿದೆ. ಸರ್ಪಸುತ್ತಿನಂತೆ ಅವನಿಗೆ ಅಂಟಿಕೊಂಡು ಅವನ ಜೀವಕ್ಕೆ ಮೂಲವಾಗಿದ್ದು ತಾನು. ತಾನೇ...

ಮನೆ ತೊರೆದು ಬಂದು ವಾರೊಪ್ಪತ್ತು ಕಳೆದಿರಲಿಲ್ಲ. ಸಣ್ಣದೊಂದು ಬಾಡಿಗೆಯ ಗೂಡು ಹಿಡಿದು, ಮದುವೆಯಾದ ನಂತರವಷ್ಟೇ ನಿಜಾರ್ಥದಲ್ಲಿ ಸತಿಪತಿಗಳಾಗುವ ನಿಶ್ಚಯದಿಂದ ಒಟ್ಟಿಗಿದ್ದರೂ ಬೇರೆಬೇರೆಯಾಗಿದ್ದರ ವಾಸ್ತವವನ್ನು ಯಾರಲ್ಲಿ ಹಂಚಿಕೊಳ್ಳುವಂತಿದೆ? ನಂಬುತ್ತಾರೆ ಯಾರು?

ಮನೆಗೆ ಬೇಕಾದ ದಿನಸಿ ಸಾಮಗ್ರಿಗಳನ್ನು ಖರೀದಿಸಿ ತರುತ್ತೇನೆಂದು ಮನೆ ಬಿಟ್ಟಿದ್ದ ಮೋಹನ ಅದ್ಯಾವ ಗುಂಗಿನಲ್ಲಿದ್ದನೋ, ತನ್ನ ಸ್ವಭಾವಸಹಜ ಮೆದುತನಕ್ಕೆ ವಿರುದ್ಧವಾಗಿ ಇಟ್ಟಿದ್ದ ದಿಟ್ಟ ಹೆಜ್ಜೆ, ಮುಂದಾಗಬಹುದಾದ ಪರಿಣಾಮ, ಅವನನ್ನು ವಿಪರೀತದ ಆತಂಕಕ್ಕೆ, ಭೀತಿಗೆ ಒಳಪಡಿಸಿತ್ತಾ? ಅಥವಾ ವಾಹನ ಚಾಲಕನದ್ದೇ ತಪ್ಪಿರಲೂಬಹುದು. ಮನೆಗೆ ಬರುವ ಹಾದಿಯ ತಿರುವಿನಲ್ಲಿ ಅಪಘಾತಕ್ಕೊಳಗಾಗಿ, ಕ್ಷಣಾರ್ಧದಲ್ಲಿ ಪ್ರಾಣಪಕ್ಷಿ ಹಾರಿ ಹೋಗಿತ್ತು. ಹೀಗೂ ಆಗುತ್ತದೆಯಾ? ಕಟ್ಟುಕತೆಗಿಂತಲೂ ವಾಸ್ತವ ಭೀಕರವಾಗಿರಲು ಸಾಧ್ಯವಾ? ಅಂತೂ ಹೀಗಾಗಿದ್ದು ನಿಜ. ಕಣ್ಣು ಕಟ್ಟಿ ಕಾಡಲ್ಲಿ ಬಿಟ್ಟಂತಾಗಿದ್ದಳು ಕಾವೇರಿ. ಅವನ ಮನೆಯವರಿಗೆ ವಿಷಯ ಮುಟ್ಟಿಸಿದ್ದು ಪೊಲೀಸರು. ಮಲೆನಾಡಿನ ಹಳ್ಳಿ ಮೂಲೆಯಲ್ಲಿದ್ದ ಮಗ ಬೆಂಗಳೂರು ಪಟ್ಟಣದಲ್ಲಿ ಅಪಮೃತ್ಯುವಿಗೆ ಈಡಾಗಿದ್ದಾನೆಂಬುವುದು ಹೆತ್ತವರಿಗೆ ಅರಗಿಸಿಕೊಳ್ಳಲಾಗದ ಸತ್ಯವಾಗಿ ಕಾಡಿತ್ತು. ಏಕಾಂತದಲ್ಲಿ ಬಚ್ಚಿಟ್ಟುಕೊಳ್ಳಬೇಕೆಂದಿದ್ದ ಕತೆ ಲೋಕಾಂತವಾಗಿ ಎಲಡಿಕೆಯಾಗಿತ್ತು. 'ಅವನು ಯಾರೋ ತನಗೆ ಗೊತ್ತೇ ಇಲ್ಲ' ಎನ್ನುವಂತೆ ಕಾವೇರಿ ಸತ್ಯ ನುಂಗಿಕೊಂಡಿದ್ದರೆ ವಿಷಯ ಬಹಿರಂಗವಾಗದಿರುವ ಸಾಧ್ಯತೆ ಇದ್ದಿರಬಹುದಾದರೂ ತನ್ನನ್ನು ಪ್ರೀತಿಸಿ, ತಾನೂ ಪ್ರೀತಿಸಿದ ಜೀವವನ್ನು ಬೀದಿ ಹೆಣವಾಗಿಸಲು ಕಾವೇರಿ ಸಿದ್ಧಳಾಗಿರಲಿಲ್ಲ. ಪರಿಸ್ಥಿತಿಯನ್ನು ಎದುರಿಸಿ ನಿಂತಿದ್ದಳು. ನಾಗೇಶಣ್ಣ ಊರಿನಿಂದ ಬಂದು ಕಾವೇರಿಯನ್ನು ಜೊತೆಗೆ ಕರೆದುಕೊಂಡು ಹೋಗಿದ್ದ. ಅವನೊಬ್ಬ, ಅವನೊಬ್ಬನೇ ಅವಳ ಪರವಾಗಿ ಸಹೃದಯನಾಗಿ ವರ್ತಿಸಿದ್ದೇ ವಿನಾ ಮನೆಯವರೆಲ್ಲಾ ಅವಳನ್ನು ತುಚ್ಛೀಕರಿಸಿ, ಗಾಯದ ಮೇಲೆ ಬರೆ ಎಳೆಯುವಂತೆ ನಡೆದುಕೊಂಡ ಒಂದಾನೊಂದು ಕಾಲದ ಕತೆಯನ್ನು ವರ್ಣಿಸಲು ಶಬ್ದಗಳೆಲ್ಲಿವೆ? ಅದೊಂದು ನರಕಯಾತನೆ. ಆಡಲಾಗದ, ಅನುಭವಿಸಲಾಗದ ಕ್ರೂರ ಶಿಕ್ಷೆ. ಅವಳ ದೊಡ್ಡಮ್ಮನಾಗಲೀ, ಪ್ರಾಣಕ್ಕೂ ಮಿಗಿಲಾಗಿ ಅವಳನ್ನು ಪ್ರೀತಿಸುತ್ತಿದ್ದ ತಂದೆಯಾಗಲೀ ಅವಳನ್ನು ಕ್ಷಮಿಸುವ ಔದಾರ್ಯ ತೋರಿಸದೆ ಅವಳನ್ನು ಜೀವಂತವಾಗಿ ಕೊಂದರು. ಈ ಆಘಾತದಿಂದ ಚೇತರಿಸಿಕೊಳ್ಳದ ಅಪ್ಪ ಹೆಚ್ಚು ಕಾಲ ಬದುಕಲಿಲ್ಲ. ದೊಡ್ಡಮ್ಮನೂ... ಹೆತ್ತ ಅಮ್ಮನೂ ಕಾವೇರಿಯನ್ನು ಸಂಪೂರ್ಣ ಕ್ಷಮಿಸಲಿಲ್ಲ. 'ನಿನ್ನಂತೋಳು ಯಾಕೆ ನನ್ನ ಹೊಟ್ಟೇಲಿ